# ವಾಸನಸ್ವಾಮಿ

■ ರಾಜಕುಮಾರ ಕುಲಕರ್ಣಿ
ಕಲೆ: ಈಶ್ವರ ಬಡಿಗೇರ



ವಾಸನಸ್ವಾಮಿ ತನ್ನೆದುರು ಕುಳಿತಿದ್ದ ಹುಡುಗನ ನಡುನೆತ್ತಿಯನ್ನೊಮ್ಮೆ ಮೂಸಿ ನೋಡಿ ದೀರ್ಘವಾಗಿ ಉಸಿರೆಳೆದುಕೊಂಡು, ಕೆಲವು ಕ್ಷಣಗಳ ಕಾಲ ಕಣ್ಮುಚ್ಚಿ ಧ್ಯಾನಸ್ಥ ಭಂಗಿಯಲ್ಲಿ ವಿರಾಜಮಾನನಾಗಿದ್ದು ಕಂಡು ಅಂದಾನಪ್ಪಗೌಡರಿಗೆ ತಮ್ಮನ್ನು ಹಲವು ದಿನಗಳಿಂದ ಕಾಡುತ್ತಿದ್ದ ಸಮಸ್ಯೆಗೆ ಬಲು ಬೇಗನೆ ಪರಿಹಾರ ದೊರೆಯುವುದೆಂಬ ಭಾವನೆ ಬಲವಾಗಿ, ಮುಖದಲ್ಲಿ ನಿರಾಳತೆಯ ಭಾವವೊಂದು ಮೂಡಿ ದೇಹ ಮತ್ತು ಮನಸ್ಸುಗಳೆರಡೂ ಹಗುರವಾದ ಅನುಭವವಾಯಿತು. ಅಂದಾನಪ್ಪಗೌಡರ ಕುಟುಂಬದ ಸದಸ್ಯರೆಲ್ಲರೂ ವಾಸನಸ್ವಾಮಿ ಕಣ್ಬಿಟ್ಟ ನಂತರ ಹೇಳಬಹುದಾದ ಮಾತಿಗಾಗಿ ಕುತೂಹಲದಿಂದ ಕ್ಷಣವನ್ನು ಯುಗವಾಗಿಸಿ ಕಾಯುತ್ತಿದ್ದರು. ಕೊನೆಗೂ ಅವರ ಸುದೀರ್ಘ ಕಾಯುವಿಕೆಗೆ ಅಂತ್ಯವಾಗುವ ಗಳಿಗೆ ಬಂತೆನ್ನುವಂತೆ ವಾಸನಸ್ವಾಮಿ ಕಣ್ಣುತೆರೆದು ತನ್ನ ಎದುರು ಕುಳಿತವರ ಮುಖಗಳನ್ನೊಮ್ಮೆ ಅವಲೋಕಿಸಿದ. ಆ ಮುಖಗಳಲ್ಲಿ ಕಾತರ ಹೆಪ್ಪುಗಟ್ಟಿದ್ದು ಕಂಡು ಅವನಿಗೆ ತನಗೊಲಿದ ದಿವ್ಯಶಕ್ತಿಯ ಬಗ್ಗೆ ಹೆಮ್ಮೆ ಎನಿಸಿ ಗಂಟಲು ಸರಿಮಾಡಿಕೊಂಡು ಅಲ್ಲಿ ನೆರೆದಿದ್ದ ಅಂದಾನಪ್ಪ ಗೌಡರ ಕುಟುಂಬ ವರ್ಗದವರ ಕುತೂಹಲಕ್ಕೆ ತೆರೆ ಎಳೆಯಲು ಅಣಿಯಾದ.

‘ಗೌಡರೆ, ನೀವು ಅಂದುಕೊಂಡಂಗ ಹುಡುಗ ಬ್ಯಾರೆ ಪೈಕಿ ಅಲ್ಲ. ಅಂವ ನಿಮ್ಮ ಪೈಕಿದವಾ. ಹಾಂಗ ಅಂವ ಬ್ಯಾರೆ ಸಮುದಾಯಕ್ಕ ಸೇರಿದವ ಆಗಿದ್ದರ ನನ್ನ ಮೂಗಿಗಿ ವಾಸನಿ ಬಡೀತಿತ್ತು. ಇದರಾಗ ಮೋಸದ ಮಾತೇ ಇಲ್ಲ. ಇನ್ನ ತಡಮಾಡಬ್ಯಾಡರಿ. ಆದಷ್ಟು ಜಲ್ದಿ ವಾಲಗ ಊದಿಸಿ ಹೋಳಿಗಿ ಊಟ ಹಾಕಿಸಿಬಿಡ್ರಿ’ ಎಂದು ವಾಸನಸ್ವಾಮಿ ಹೇಳುತ್ತಿದ್ದಂತೆ ಅದುವರೆಗೂ ಇದ್ದ ಬಿಗುವಿನ ವಾತಾವರಣ ಸಡಿಲಾಗಿ ಅಲ್ಲಿ ಕುಳಿತಿದ್ದವರ ಮುಖದಲ್ಲಿ ಏಕಕಾಲಕ್ಕೆ ನಿರಾಳತೆ ಮತ್ತು ಸಂತೋಷದ ಭಾವ ಮೂಡಿತು.

ಅಂದಾನಪ್ಪ ಗೌಡರು ರೂಪಾಯಿ ನೋಟುಗಳ ಸಣ್ಣ ಕಟ್ಟನ್ನು ವಾಸನಸ್ವಾಮಿ ಎದುರಿಟ್ಟು ದೀರ್ಘದಂಡ ನಮಸ್ಕಾರ ಹಾಕಿದರು. ಗೌಡರ ಕುಟುಂಬಸ್ಥರು ಸರತಿಸಾಲಿನಲ್ಲಿ ಬಂದು ನಮಸ್ಕರಿಸಿ ಆಶೀರ್ವಾದ ಪಡೆದು ಧನ್ಯರಾದರು. ಹಳ್ಳಿಯ ವಾತಾವರಣದ ಅನುಭವವಿಲ್ಲದ ಹುಡುಗನಿಗೆ ಹೀಗೆ ತನ್ನನ್ನು ಕರೆತಂದು ಅವಮಾನ ಮಾಡಿದರೆಂದು ಸಿಟ್ಟು ಬಂತಾದರೂ ಅಂದಾನಪ್ಪಗೌಡರ ಮಗಳು ವೈಜಯಂತಿಯ ಮುಖ ನೋಡುತ್ತಿದ್ದಂತೆ ಸಿಟ್ಟೆಲ್ಲ ಕರಗಿ ಕೆಲವು ಕ್ಷಣಗಳ ಹಿಂದೆ ಕೋಪ ತುಂಬಿದ್ದ ಎದೆಯಲ್ಲಿ ಈಗ ಪ್ರೇಮಗೀತೆ ಪಲ್ಲವಿಸತೊಡಗಿತು.

* * *

ವಾಸನಸ್ವಾಮಿಯ ನಿಜವಾದ ಹೆಸರು ಮಾದೇವಸ್ವಾಮಿ ಮೇಲಿನಮನಿ ಎಂದು ಊರಿನವರಿಗಿರಲಿ ಅದು ಸ್ವತಃ ವಾಸನಸ್ವಾಮಿಗೇ ಮರೆತುಹೋಗುವಷ್ಟು ನೆನಪಿನಕೋಶದಿಂದ ಮರೆಯಾಗಿ ಹೋಗಿತ್ತು. ಹುಟ್ಟುತ್ತಲೇ ಬಡತನವನ್ನು ಮೈಗಂಟಿಸಿಕೊಂಡು ಬಂದಿದ್ದ ಮಾದೇವಸ್ವಾಮಿ ಊರ ಅಗಸಿ ಮುಂದಿನ ಮಾರುತೇಶ್ವರ ಗುಡಿಯ ಪೂಜಾರಿ ಗವಿಸಿದ್ದಸ್ವಾಮಿ ಮೇಲಿನಮನಿಯ ಆರುಮಕ್ಕಳಲ್ಲಿ ಕೊನೆಯವನು. ಐದು ಹೆಣ್ಣುಮಕ್ಕಳ ನಂತರ ಹುಟ್ಟಿದ ಏಕಮಾತ್ರ ಗಂಡುಸಂತಾನವೆಂದು ಮನೆಯಲ್ಲಿ ಅಪ್ಪ ಅವ್ವ ಮುದ್ದಿನಿಂದಲೇ ಮಾದೇವಸ್ವಾಮಿಯನ್ನು ಬೆಳೆಸಿದ್ದರು. ಐದುಜನ ಅಕ್ಕಂದಿರು ಬಡತನದಲ್ಲೂ ಮುದ್ದಿನ ತಮ್ಮನನ್ನು ಅಕ್ಕರೆಯಿಂದಲೇ ನೋಡಿಕೊಂಡಿದ್ದರು. ಅಪ್ಪ ಅವ್ವನ ಪ್ರೀತಿ ಅಕ್ಕಂದಿರ ಮಮತೆಯಿಂದ ಶಾಲೆಗೆ ಮಾದೇವಸ್ವಾಮಿ ಹೆಸರು ಹಚ್ಚುವುದು ತಡವಾಗಿ ಅವನಿಗೆ ವಿದ್ಯೆ ಎನ್ನುವುದು ನೈವೇದ್ಯವಾಗಿ ಏಳನೇ ತರಗತಿ ಪಾಸಾಗುವುದರೊಂದಿಗೆ ಅವನು ಓದಿಗೆ ತಿಲಾಂಜಲಿಯಿತ್ತಿದ್ದ. ಮೇಲಿನಮನಿ ಮನೆತನದಲ್ಲಿ ತಲಾತಲಾಂತರದಿಂದ ಯಾರಿಗೂ ವಿದ್ಯೆ ತಲೆಗೆ ಹತ್ತಿಲ್ಲವೆಂದು ಮನಸ್ಸಿಗೆ ಸಮಾಧಾನ ತಂದುಕೊಂಡ ಗವಿಸಿದ್ದಸ್ವಾಮಿ ಮಗನನ್ನು ಶಾಲೆ ಬಿಡಿಸಿ ದಿನಸಿತ್ಯದ ಮಾರುತೇಶ್ವರನ ಪೂಜೆಗೆ ತನ್ನೊಂದಿಗೆ ಜೊತೆಯಾಗಿಸಿಕೊಂಡಿದ್ದ.

ಆರು ಮಕ್ಕಳಿರುವ ಕುಟುಂಬಕ್ಕೆ ಗುಡಿಯ ಪೂಜಾರಿಕೆಯಿಂದ ಬರುತ್ತಿದ್ದ ಅಲ್ಪ ಆದಾಯ ಕುಂಭಕರ್ಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆಯಂತಾಗಿತ್ತು. ಅವ್ವ ಮತ್ತು ಅಕ್ಕಂದಿರು ಗೌಡರ ಹೊಲದಲ್ಲಿ ಕೂಲಿ ಕೆಲಸಕ್ಕೆ ಹೋಗುವುದು ಅನಿವಾರ್ಯವಾಗಿತ್ತು. ಬೆಳಗ್ಗೆ ಮತ್ತು ರಾತ್ರಿ ಎರಡು ಹೊತ್ತಿನ ಗುಡಿಯ ಪೂಜೆಯ ನಂತರ ಬಿಡುವಿನ ವೇಳೆಯಲ್ಲಿ ಮಾದೇವಸ್ವಾಮಿ ಊರಿನ ಪುಂಡಪೋಕರಿಗಳೊಂದಿಗೆ ಅಂಡಲೆಯುತ್ತಿದ್ದ. ಮಗನ ಸಾಹಸ ಆಗಾಗ ದೂರಿನ ರೂಪದಲ್ಲಿ ಊರಿನವರಿಂದ ಕಿವಿಯ ಮೇಲೆ ಬಿದ್ದು ಹೀಗೇ ಬಿಟ್ಟರೆ